1	2	3	4	5
13.	Kaksabhavi	Asplt. of Hansabhavi Dasankoppa Road	1,000	1,500
14.	Hirekerur	Asplt. of Chowdeswari Nagar Main Road and I.G. Road	3,000	2,000
15.	Hirekerur	Asplt. of Hirekerur Tavalagi Road to Hosali Village Road	2,000	1,590
16.	Chikkerur	Asplt. of Chikkerur Haolur Road.	3,000	2,000
17.	Chikkabudikal	Impts. of Chikkabudihal Sutakote Road	1,000	1,000
18.	Satagihalli	Impts. of Satagihalli Village Main Road	1,000	1,000
19.	Kallur	Asplt. of Kallur Bus station Main Road	2,000	2,000
	Sector : Other Building/works			
20.	Kattihalli	Bus Stand Building at Kattihalli	5,000	3,000
21.	Shitikonda	Sukudayabhavan at Shitikonda Village	1,000	1,000
22.	Gundagatte	Constn. of Bus Stand at Gundagatte	0,000	0,200
	Total		**43,000**	**36,760**

ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ಸಂಪರ್ಕ ಕೋರಿ ಬಂದ ಅರ್ಜಿಗಳು

496 -ಶ್ರೀ ಡಿ.ಎಸ್. ಮಾದಪ್ಪ (ಮಡಕೇರಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ಸಂಪರ್ಕ ಕೋರಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)*

ಆ) *ಜಿಲ್ಲೆಯಲ್ಲಿ ವಿದ್ಯುತ್ ಸೌಲಭ್ಯ ಪಡೆಯಲು ಬಾಕಿ ಇರುವ ಗ್ರಾಮಗಳೆಷ್ಟು? ಹಾಗಿದ್ದಲ್ಲಿ ಇದಕ್ಕೆ ಕಾರಣವೇನು?*

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಕೊಡಗು ಜಿಲ್ಲೆಯಲ್ಲಿ ಆಗಸ್ಟ್ 98ರ ಅಂತ್ಯದಲ್ಲಿರುವಂತೆ ವಿದ್ಯುತ್ ಸಂಪರ್ಕ ಕೋರಿ ಬಂದ ವಿವಿಧ ವರ್ಗಕ್ಕೆ ಸೇರಿದ ಅರ್ಜಿಗಳ ಒಟ್ಟು ಸಂಖ್ಯೆ 3980. ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) 1991ರ ಜನಗಣತಿ ಪ್ರಕಾರ ಈ ಜಿಲ್ಲೆಯಲ್ಲಿ ನಾಲ್ಕು ಗ್ರಾಮಗಳು ವಿದ್ಯುದೀಕರಣಕ್ಕಾಗಿ ಬಾಕಿ ಉಳಿದಿದೆ. ಈ ಎಲ್ಲಾ ನಾಲ್ಕು ಗ್ರಾಮಗಳು ಸೋಮವಾರ ಪೇಟೆ ತಾಲ್ಲೂಕಿನಲ್ಲಿದೆ. 1981ರ ಜನಗಣತಿ ಸಮಯದಲ್ಲಿ ಈ ನಾಲ್ಕು ಗ್ರಾಮಗಳು ಬೇಚರಕ್ ಆಗಿದ್ದುವು. ಆದುದರಿಂದ, ಆ ಸಮಯದಲ್ಲಿ

ವಿದ್ಯುದ್ದೀಕರಣ ಮಾಡಿರುವುದಿಲ್ಲ. ಈಗ 1991ರ ಜನಗಣತಿ ಪ್ರಕಾರ ಈ ಗ್ರಾಮಗಳಲ್ಲಿ ಜನವಸತಿ ಇದೆ. ಇವುಗಳ ವಿದ್ಯುದ್ದೀಕರಣ ಕಾರ್ಯವನ್ನು ಗ್ರಾಮೀಣ ವಿದ್ಯುದ್ದೀಕರಣ ನಿಗಮದ ಆರ್ಥಿಕ ನೆರವಿನೊಡನೆ ವಿದ್ಯುದೀಕರಣಗೊಳಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಉಳಿದ ಎರಡು ತಾಲ್ಲೂಕುಗಳಾದ ಮಡಿಕೇರಿ ಮತ್ತು ವಿರಾಜಪೇಟೆ ತಾಲ್ಲುಕುಗಳಲ್ಲಿ 1991ರ ಜನಗಣತಿ ಪ್ರಕಾರ ಜನವಸತಿ ಇರುವ ಎಲ್ಲಾ ಗ್ರಾಮಗಳನ್ನು ವಿದ್ಯುದೀಕರಣಗೊಳಿಸಲಾಗಿದೆ.

ಅನುಬಂಧ

ತಾಲ್ಲೂಕು	ಗೃಹ ಬಳಕೆ	ಸರ್ವ ವಿದ್ಯುತ್ ಗೃಹ	ವಾಣಿಜ್ಯ ದೀಪ	ನೀರಾವರಿ ಪಂಪುಸೆಟ್ಟು	ವಾಟರ್ ವರ್ಕ್ಸ್	ಎಲ್ ಟಿ ಪವರ್	ಒಟ್ಟು
ಮಡಿಕೇರಿ	246	119	34	6	14	4	423
ಸೋಮವಾರಪೇಟೆ	2322	169	172	91	30	44	2828
ವಿರಾಜಪೇಟೆ	524	80	62	30	21	12	729
	3092	**368**	**268**	**127**	**65**	**60**	**3980**

ಹೇಮಾವತಿ ಎಡದಂಡೆ ಕಾಲುವೆಯ ಕಾಮಗಾರಿಗಳು

497 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಎಡದಂಡೆ ಕಾಲುವೆಯ 0-72ನೇ ಕಿ.ಮೀ. ವರೆಗೆ ಹಿಂದಿನ ನಾಲ್ಕು ವರ್ಷಗಳಿಂದ ಕಾಮಗಾರಿಗಳಿಗೆ ಆದ ವೆಚ್ಚ ಎಷ್ಟು?

ಆ) 0-72 ಕಿ.ಮೀ. ವರೆಗಿನ ನಾಲೆಯನ್ನು ಆಗಲ ಮಾಡುವ ಪ್ರಸ್ತಾವನೆಯು ಮಂಜೂರಾತಿಯಾಗದೇ ಎಷ್ಟು ವರ್ಷದಿಂದ ಸರ್ಕಾರದ ಮುಂದಿದೆ.

ಇ) ಅದಕ್ಕೆ ಕಾರಣಗಳೇನು?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :

ಅ)

ವರ್ಷ	ವೆಚ್ಚ *(ರೂ. ಲಕ್ಷಗಳಲ್ಲಿ)*
1994-95	686.50
1995-96	488.25
1996-97	981.77
1997-98	897.07
ಒಟ್ಟು	**3053.59**